# ಹಳ್ಳಿಗಳ ಶುಚಿತ್ವಕ್ಕೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ತಾಕೀತು



ಹೊಸಪೇಟೆ

ತಾಲೂಕಿನ 15 ಗ್ರಾ.ಪಂ.ವ್ಯಾಪ್ತಿಯ ಹಳ್ಳಿಗಳಲ್ಲಿ ಪ್ರತಿ ಮನೆಗೊಂದು ಶೌಚಾಲಯ ನಿರ್ಮಿಸುವಂತೆ ಅಧಿಕಾರಿಗಳಿಗೆ ಕೊಟ್ಟ ಗಡುವು ಮುಗಿದಿದ್ದು, ಇನ್ನೂ ಶೌಚಾಲಯ ನಿರ್ಮಿಸಲು ಕ್ರಮ ಕೈಗೊಂಡಿಲ್ಲ. ಕೂಡಲೇ ಡಿ.31ರೊಳಗೆ ಪ್ರತಿ ಮನೆಗೊಂದು ಶೌಚಾಲಯ ನಿರ್ಮಿಸಿಕೊಳ್ಳುವಂತೆ ಸಾರ್ವಜನಿಕರ ಮನವೊಲಿಸಿ, ಸ್ವಚ್ಚತೆಯನ್ನು ಕಾಪಾಡಬೇಕು ಎಂದು ತಾ.ಪಂ.ಇಒ ಟಿ.ವೆಂಕೋಬಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇಲ್ಲಿನ ತಾ.ಪಂ.ಯ ವಿದ್ಯಾರಣ್ಯ ಸಭಾಂಗಣದಲ್ಲಿ ನಡೆದ ಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ 15 ಗ್ರಾ.ಪಂ.ವ್ಯಾಪ್ತಿಯ ಹಳ್ಳಿಗಳಲ್ಲಿ ಇನ್ನೂ ಮನೆಗೊಂದು ಶೌಚಾಲಯ ನಿರ್ಮಿಸಿಲ್ಲ. ಇದಕ್ಕಾಗಿ ವಿಧಿಸಿದ್ದ ಗಡುವು ಮುಕ್ತಾಯಗೊಂಡಿದ್ದು, ಕೂಡಲೇ ಡಿ.31ರೊಳಗೆ ಕೆಲಸ ಪೂರ್ತಿಗೊಳಿಸಬೇಕು. ತಾಲೂಕು ಮಟ್ಟದ ಅಧಿಕಾರಿಗಳು, ಪಂ.ಅಭಿವೃದ್ಧಿ ಅಧಿಕಾರಿಗಳು ಪ್ರತಿ 2-3 ದಿನಕ್ಕೊಮ್ಮೆ ಹಳ್ಳಿಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಶೌಚಾಲಯ ನಿರ್ಮಿಸಿಕೊಳ್ಳುವಂತೆ ಮನವೊಲಿಸಬೇಕು. ಈ ಮೂಲಕ ಹಳ್ಳಿಗಳಲ್ಲಿ ಸ್ವಚ್ಚತೆಯನ್ನು ಕಾಪಾಡಬೇಕು ಎಂದರು.

ರಾಜ್ಯ ಸರ್ಕಾರ ಪ.ಜಾ. ಮತ್ತು ಪ.ಪಂ.ಜನರಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.15ಸಾವಿರ, ಹಾಗು ಇತರೆ ವರ್ಗದ ಜನರಿಗೆ ರೂ.12ಸಾವಿರಗಳನ್ನು ನೀಡುತ್ತಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿಸಬೇಕು ಎಂದರು.

ಸ್ಥಾಯಿ ಸಮಿತಿ ಅಧ್ಯಕ್ಷ ರಾಜಪ್ಪ ಮಾತನಾಡಿ, ಸರ್ಕಾರ ಗರ್ಭಿಣಿಯರಿಗೆ, ಬಾಣಂತಿಯರಿಗೆ ಪೌಷ್ಠಿಕ ಆಹಾರ ಒದಗಿಸಲು ಮಾತೃಪೂರ್ಣ ಯೋಜನೆ ಜಾರಿಗೆ ತಂದಿದೆ. ಆದರೆ ಇದು ಸರಿಯಾಗಿ ಅನುಷ್ಠಾನಕ್ಕೆ ಬಂದಿಲ್ಲ, ಗರ್ಭಿಣಿ, ಬಾಣಂತಿಯರು ಅಂಗನವಾಡಿ ಕೇಂದ್ರಗಳಿಗೆ ಬರುತ್ತಿಲ್ಲ. ಹಾಗಾದರೆ ಅವರಿಗೆ ವಿತರಿಸುವ ಪೌಷ್ಠಿಕ ಆಹಾರ ಎಲ್ಲಿಗೆ ಹೋಗುತ್ತಿದೆ ? ಎಂದು ಪ್ರಶ್ನಿಸಿದರು.

ಇದಕ್ಕೆ ಇಒ ವೆಂಕೋಬಪ್ಪ ಪ್ರತಿಕ್ರಿಯಿಸಿ, ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಇತ್ತ ಗಮನ ಹರಿಸಬೇಕು. ಸರ್ಕಾರ ಜಾರಿಗೆ ತಂದಿರುವ ಯೋಜನೆಯು ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಲೋಕೋಪಯೋಗಿ, ಬಿಸಿಎಂ ಇಲಾಖೆ, ಶಿಕ್ಷಣ, ಮೀನುಗಾರಿಕೆ, ಕಾರ್ಮಿಕ, ತೋಟಗಾರಿಕೆ, ಜೆಸ್ಕಾಂ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶಿಲನೆ ನಡೆಸಲಾಯಿತು.

ತಾ.ಪಂ.ಅಧ್ಯಕ್ಷೆ ಜೋಗದ ನೀಲಮ್ಮ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಕೆ.ಗಾದಿಲಿಂಗಪ್ಪ, ಬಿಸಿಎಂ ಅಧಿಕಾರಿ ಯರ್ರಿಸ್ವಾಮಿ, ಬಿಇಒ ಎಲ್.ಡಿ.ಜೋಶಿ, ಸಿಡಿಪಿಒಇಲಾಖೆಯ ಪರಮೇಶ್ವರ್, ಅರಣ್ಯ ಇಲಾಖೆಯ ರಾಜಶೇಖರ ಲಮಾಣಿ ಇದ್ದರು.

# ನಿರುದ್ಯೋಗಿ ಯುವಕರಿಗಾಗಿ ಉಚಿತ ಮೊಬೈಲ್ ತರಬೇತಿ

ಬಳ್ಳಾರಿ

ಸಿಂಡ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯ ವತಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕರಿಗೆ ಉಚಿತವಾಗಿ ಮೊಬೈಲ್ ರಿಪೇರಿ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ಸಿಂಡ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

30 ದಿನಗಳ ತರಬೇತಿಯ ಅವಧಿಯಲ್ಲಿ ಉಚಿತ ಊಟ ವಸತಿಯೊಂದಿಗೆ ತರಬೇತಿ ಹಾಗೂ ಕೌಶಲ್ಯದ ಜೊತೆಗೆ ಉದ್ಯಮಶೀಲತೆ, ವ್ಯಕ್ತಿತ್ವ ವಿಕಾಸನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗುವುದು. ಕನ್ನಡ ಓದಲು ಹಾಗೂ ಬರೆಯಲು ಬರುವಂತಹ ಬಿ.ಪಿ.ಎಲ್. ಕಾರ್ಡ್ ಹೊಂದಿರುವ 20 ರಿಂದ 40 ವರ್ಷದೊಳಗಿನ ನಿರುದ್ಯೋಗಿ ಸ್ವ-ಉದ್ಯೋಗ ಆಕಾಂಕ್ಷಿಗಳು ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ.

10ನೇ ತರಗತಿ ಪಾಸಾಗಿರುವ ಮೋಬೈಲ್ ರಿಪೇರಿ ಬಗ್ಗೆ ಪ್ರಾಥಮಿಕ ಅನುಭವ ಹೊಂದಿರುವ 25 ಜನರಿಗೆ ಮಾತ್ರ ಅವಕಾಶ ನೀಡಲಾಗುವುದು, ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ವಯಸ್ಸು, ವಿದ್ಯಾರ್ಹತೆ, ಪಡೆಯಲಿಚ್ಛಿಸುವ ತರಬೇತಿ, ಸಂಬಂಧಿತ ವಿಷಯದಲ್ಲಿ ಪ್ರಾಥಮಿಕ ಜ್ಞಾನ, ಅನುಭವ, ಬಿಳಿ ಹಾಳೆಯ ಮೇಲೆ ಅರ್ಜಿಯನ್ನು ಬರೆದು ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಅಂಟಿಸಿ, ಡಿ.15ರೊಳಗಾಗಿ ಸೀಂಡ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಡಿ.ಐ.ಸಿ ಕಾಂಪೌಂಡ್, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹತ್ತಿರ, ಹೊಸಪೇಟೆ ರಸ್ತೆ, ಬಳ್ಳಾರಿಗೆ ಕಳಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ದೂರವಾಣಿ 08392-244117 ಗೆ ಸಂಪರ್ಕಿಸಬಹುದು.

# ಸಂಭ್ರಮದಿಂದ ಈದ್ ಮಿಲಾದ್ ಆಚರಣೆ



ಹಗರಿಬೊಮ್ಮನಹಳ್ಳಿ

ನೂರಾರು ಸಂಖ್ಯೆಯ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಶುಭಾಶಯ ಕೋರಿಕೊಳ್ಳತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆಕ್ಕಾ-ಮದೀನ ಸ್ತಬ್ದ ಚಿತ್ರ ಮೆರವಣಿಗೆಯೊಂದಿಗೆ ಶನಿವಾರ ಈದ್ ಮಿಲಾದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಟಿಪ್ಪು ಸುಲ್ತಾನ್ ಅಭಿಮಾನಿಗಳ ಮಹಾವೇದಿಕೆಯ ಕಾರ್ಯಕರ್ತರು ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಬ್ರೆಡ್ ವಿತರಣೆ ಮಾಡಿ ಈದ್ ಆಚರಣೆ ನಡೆಸಿದರು.

ಈ ವೇಳೆ ಮಾಜಿ ಶಾಸಕ ಸಿರಾಜ್ ಶೇಖ್, ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಬಾಬುವಲಿ, ಸದಸ್ಯರಾದ ಜರಿನಾ ಬೇಗಂ, ಜಹೇದಾ ರಹೇಮನ್, ಅಲ್ಲಾಭಕ್ಷಿ, ನೆಲ್ಲು ಇಸ್ಮಾಹಿಲ್, ಟಿಪ್ಪು ಸುಲ್ತಾನ್ ಅಭಿಮಾನಿಗಳ ಮಹಾವೇದಿಕೆಯ ಅಧ್ಯಕ್ಷ ಸೈಯದ್ ಇರ್ಫಾನ್ ಮತ್ತು ಸಮಾಜದ ಮುಖಂಡರು ಮೆರವಣಿಗೆಯಲ್ಲಿ ಭಾಗವಹಿಸಿದರು.

# ತರಬೇತಿ ಪಡೆಯದ ಶಿಕ್ಷಕರಿಗೆ ತರಬೇತಿ

ಬಳ್ಳಾರಿ

ರಾಜ್ಯದ ವಿವಿಧ ಆಡಳಿತ ಮಂಡಳಿಗಳ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ತರಬೇತಿಯನ್ನು ಪಡೆಯದೇ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಇರುವುದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ತರಬೇತಿ ಪಡೆಯದೆ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ತರಬೇತುಗೊಳಿಸಲು ಎನ್‌ಐಓಎಸ್ ಸಂಸ್ಥೆ ವತಿಯಿಂದ ಆನ್‌ಲೈನ್ ಮೂಲಕ ಡಿಇಎಲ್‌ಇಡಿಗೆ ತರಬೇತುಗೊಳಿಸಲಾಗುತ್ತಿದೆ ಎಂದು ಡಯಟ್ (ಅಭಿವೃದ್ಧಿ) ಉಪನಿರ್ದೇಶಕರು ಮತ್ತು ಪ್ರಾಂಶುಪಾಲರು ತಿಳಿಸಿದ್ದಾರೆ.

ಶಿಕ್ಷಕರು ಆರ್.ಟಿ.ಇ ಕಾಯಿದೆ ಸೆಕ್ಷನ್ 23(2)ರ ಪ್ರಕಾರ ಮಾರ್ಚ್ 2019ರ ಒಳಗಾಗಿ ತರಬೇತಿ ಪೂರ್ಣಗೊಳಿಸಬೇಕಾದ ಕಾಲಮಿತಿಯನ್ನು ಎಂಹೆಚ್‌ಆರ್‌ಡಿ ನೀಡಿದೆ. ಇಂತಹ ಶಿಕ್ಷಕರನ್ನು ತರಬೇತುಗೊಳಿಸಲು ಡಯಟ್ ಬಳ್ಳಾರಿ ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹೊಸಪೇಟೆಯನ್ನು ಅಧ್ಯಯನ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಎನ್‌ಐಓಎಸ್ ಪೋರ್ಟಲ್ ನಲ್ಲಿ ನೋಂದಾಯಿಸಿಕೊಂಡಿರುವ ಶಿಕ್ಷಕರು ಅಧ್ಯಯನ ಕೇಂದ್ರದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಡಿಎಸ್‌ಇಆರ್‌ಟಿ ವೆಬ್‌ಸೈಟ್ ಮತ್ತು ಎನ್‌ಐಓಎಸ್ ವೆಬ್‌ಸೈಟ್ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವವಿಖ್ಯಾತ ಹಂಪಿಯಲ್ಲಿ ಫಲಪೂಜಾ ಮಹೋತ್ಸವಕ್ಕೆ ತೆರೆ



ಹೊಸಪೇಟೆ

ತಾಲೂಕಿನ ವಿಶ್ವವಿಖ್ಯಾತ ಹಂಪಿಯ ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನದಲ್ಲಿ ಮಂಗಳವಾರ ರಾತ್ರಿ ನಡೆದ ಮೂರು ದಿನಗಳ ಫಲಪೂಜಾ ಮಹೋತ್ಸವಕ್ಕೆ ವಿದ್ಯುಕ್ತ ತೆರೆ ಬಿತ್ತು. ವಿಜಯನಗರ ಸಾಮ್ರಾಜ್ಯದ ದೊರೆ ಶ್ರೀಕೃಷ್ಣ ದೇವರಾಯ ಸಮರ್ಪಿಸಿದ ನವರತ್ನ ಖಚಿತವಾದ ಸುವರ್ಣಮುಖ ಕಮಲದಿಂದ ಅಲಂಕರಿಸಿದ್ದ ಶ್ರೀ ವಿರುಪಾಕ್ಷ ದೇವರನ್ನು ನೋಡಲು ಕೊನೆ ದಿನವೂ ರಾಜ್ಯದ ವಿವಿಧ ಕಡೆಗಳಿಂದ ಸಾವಿರಾರು ಜನ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಬೆಳಿಗ್ಗೆಯಿಂದ ಸಾಯಂಕಾಲ ವರೆಗೂ ಜನ ಜಂಗುಳಿ ಕಂಡು ಬಂತು. ದೇವರಿಗೆ ಮಹಾಮಂಗಳಾರತಿ ನಡೆದ ನಂತರ ದೇವಸ್ಥಾನದ ಆವರಣದಲ್ಲಿ ಭಕ್ತರು ದೀಪ ಬೆಳಗಿಸಿ ದೀಪೋತ್ಸವ ಆಚರಿಸಿದರು. ಇದರಿಂದ ಇಡೀ ದೇವಸ್ಥಾನಕ್ಕೆ ಒಂದು ವಿಶೇಷ ಕಳೆ ಬಂದಿತ್ತು. ಮಧ್ಯರಾತ್ರಿ ಶ್ರೀ ವಿರುಪಾಕ್ಷ ಸ್ವಾಮಿಗೆ ಮತ್ತು ಪಂಪಾಂಭಿಕೆಗೆ ನಡೆದ ವಿವಾಹ ಕಾರ್ಯಕ್ರಮವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

# ತಂಬಾಕಿನಿಂದ ದೂರವಿರಿ, ಶಿಕ್ಷಣದತ್ತ ಗಮನಹರಿಸಿ



ಬಳ್ಳಾರಿ

ಯುವಕರು ತಂಬಾಕು ಸೇವೆನೆಯಿಂದ ದೂರವಿದ್ದು, ಶಿಕ್ಷಣದತ್ತ ಗಮನಹರಿಸಿ ಎಂದು ಅಪರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ನೋಡೆಲ್ ಅಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬುಧವಾರರಂದು ತಂಬಾಕು ನಿಯಂತ್ರಣ ಕಾಯ್ದೆ ಹಾಗೂ ತಂಬಾಕು ಸೇವನೆ ದುಷ್ಪರಿಣಾಮಗಳ ಕುರಿತು ಬೀದಿ ನಾಟಕದ ಮೂಲಕ ಜಿಲ್ಲಾಯಾದ್ಯಂತ ಜನಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಜಾಥಾ ಕಾರ್ಯಕ್ರಮವು ಜಿಲ್ಲೆಯ 7 ತಾಲೂಕಗಳಲ್ಲಿ ಡಿ.06 ರಂದು ಬಳ್ಳಾರಿ, ಡಿ.11 ರಂದು ಸಿರುಗುಪ್ಪ, ಡಿ.12 ರಂದು ಹೊಸಪೇಟೆ, ಡಿ.13 ರಂದು ಹೆಚ್.ಬಿ.ಹಳ್ಳಿ, ಡಿ.14 ರಂದು ಹಡಗಲಿ, ಡಿ.15 ರಂದು ಕೂಡ್ಲಿಗಿ, ಡಿ.16 ರಂದು ಸಂಡೂರಿ ತಾಲೂಕಿನ ಆಯ್ದ ಪ್ರಮುಖ 40 ಸ್ಥಳಗಳಲ್ಲಿ ಬೀದಿ ನಾಟಕಗಳ ಮೂಲಕ ಪ್ರದರ್ಶನ ನೀಡಿ ಜನಜಾಗೃತಿ ಮೂಡಿಸಲಾಗುತ್ತದೆ. ಜನಜಾಗೃತಿ ಬೀದಿ ನಾಟಕದ ಜಾಥಾದಲ್ಲಿ ಆಯಾ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ತಾಲೂಕಿಗೆ ಭೇಟಿ ನೀಡಿದಾಗ ಕಲಾ ತಂಡಕ್ಕೆ ಅಗತ್ಯ ಸಹಕಾರ ನೀಡಿ ಈ ಜನಜಾಗೃತಿ ಜಾಥಾವನ್ನು ಯಶ್ವಸಿಗೊಳಿಸಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗೂ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಅನಿಲ್ ಕುಮಾರ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರರಾದ ದುರುಗಪ್ಪ.ಎಸ್.ಮಾಚನೂರು, ಜಿಲ್ಲಾ ಕಾರ್ಮಿಕ ಅಧಿಕಾರಿ ನಾಗರಾಜ್, ಕಾರ್ಮಿಕ ನಿರೀಕ್ಷಕಾರದ ರವಿದಾಸ್, ಧನಪಾಲ್ ನಾಯ್ಕ್, ಶಿಕ್ಷಣಾ ಇಲಾಖೆಯ ರಾಘವೇಂದ್ರ ರೆಡ್ಡಿ, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಮೊಹಮ್ಮದ್ ರಫೀಕ್, ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ನಿರ್ದೇಶಕರು ಮೌನೇಶ, ಕ್ಷೇತ್ರ ಅಧಿಕಾರಿ ಈಶ್ವರಾಯ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಎಸ್.ಭೋಜರಾಜ, ಮಲ್ಲೇಶಪ್ಪ ಮಕ್ಕಳ ಸಹಾಯವಾಣಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮಣ್ಣಿನ ಸಂರಕ್ಷಣೆ ಮಾಡಿ

>>> 1ನೇ ಪುಟದಿಂದ...

ಕೂರಿಗೆ ಬಿತ್ತನೆ ಮಾಡಿ ಕಡಿಮೆ ಖರ್ಚಿನಲ್ಲಿ ಉತ್ತಮ ಬೆಳೆ ಬೆಳೆದಿರುವ ರೈತ ಜನಾರ್ದನ ರೆಡ್ಡಿ ಮಾತನಾಡಿ ನಾಟಿ ಪದ್ಧತಿಯಲ್ಲಿ ಭೂಮಿ ಹದವಾಗಿಸಲು ಮಾಡುವ ಮತ್ತು ಸಸಿಮಡಿ ತಯಾರಿಸುವ ಖರ್ಚನ್ನು ಕೂರಿಗೆ ಬಿತ್ತನೆ ಮಾಡಿ ಉಳಿಸಿಕೊಳ್ಳಬಹುದು. ಹಾಗೂ ಇದರಲ್ಲಿ ಕಡಿಮೆ ರಸಗೊಬ್ಬರ ಬಳಕೆ ಮಾಡಲಾಗಿದೆ ಉತ್ತಮವಾದ ಫಸಲು ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಹಾಯಕ ಕೃಷಿ ನಿರ್ದೇಶಕ ಹುಸೇನ್ ಸಾಬ್ ಅವರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಕೃಷಿ ವಿಜ್ಞಾನಿಗಳಾದ ಆನಂದ, ರವಿಶಂಕರ್, ತಾ.ಪಂ ಸದಸ್ಯ ಭೋಗರಾಜ್, ಗ್ರಾಂ.ಪಂ.ಅಧ್ಯಕ್ಷ ಹುಲೇಪ್ಪ, ರೈತ ಮುಖಂಡ ಶಿವಯ್ಯ, ಕೃಷಿ ಅಧಿಕಾರಿ ಶಿವನಗೌಡ ಪಾಟೀಲ್, ರೈತರಾದ ಮಲ್ಲೇಶಪ್ಪ, ವೀರನಗೌಡ, ಶ್ರೀನಿವಾಸ, ಪರಶುರಾಮ್, ಕೃಷಿ ಇಲಾಖೆ ಸಿಬ್ಬಂದಿ ಯಶೋಧ, ಶಾಂತ, ಹಾಗೂ ಮುಖಂಡ ಗೋಪಾಲ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಓದಿರಿ ಪ್ರಜಾಪ್ರಗತಿ
ವೀಕ್ಷಿಸಿ ಪ್ರಗತಿ ಟಿವಿ

# ವಿಕಲಚೇತನರಿಗೆ ಅನುಕಂಪದ ಬದಲು ಪ್ರೋತ್ಸಾಹ ನೀಡಬೇಕು




ಹೊಸಪೇಟೆ

ವಿಕಲಚೇತನರಿಗೆ ದಯೆ, ಕರುಣೆ, ಅನುಕಂಪ ತೋರಿಸುವ ಬದಲು ಅವರಿಗೆ ಪೋಷಕರು ಹಾಗು ಸಾರ್ವಜನಿಕರು ಪ್ರೋತ್ಸಾಹ ನೀಡಿದರೆ ಏನು ಬೇಕಾದರೂ ಸಾಧಿಸಬಲ್ಲರು ಎಂದು ಶಾಸಕ ಆನಂದಸಿಂಗ್ ಹೇಳಿದರು.

ಇಲ್ಲಿನ ಪಟೇಲನಗರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಬುಧವಾರ ಹೊಸಪೇಟೆ ತಾಲೂಕು ವಿಕಲಚೇತನರ ಸಂಘ-ಸಂಸ್ಥೆಗಳ ವೇದಿಕೆ ಆಯೋಜಿಸಿದ್ದ ವಿಶ್ವ ವಿಕಲಚೇತನರ ದಿನ-2017 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಕಲಚೇತನರ ತಂದೆ ತಾಯಿಗಳು ಮತ್ತು ಸಾರ್ವಜನಿಕರು ಅವರಿಗೆ ಶಿಕ್ಷಣ, ಕ್ರೀಡೆ ಸೇರಿದಂತೆ ಎಲ್ಲಾ ರಂಗಗಳಲ್ಲೂ ಪ್ರೋತ್ಸಾಹ ನೀಡಿದರೆ ಅವರು ಎಲ್ಲದರಲ್ಲೂ ಜಯ ಸಾಧಿಸುತ್ತಾರೆ. ವಿಕಲಚೇತನರು ಎಂದು ಅವರಿಗೆ ದಯೆ, ಅನುಕಂಪ ತೋರಿಸುವ ಅಗತ್ಯವಿಲ್ಲ. ಅವರಲ್ಲಿನ ಆತ್ಮವಿಶ್ವಾಸವನ್ನು ನೋಡಿ ನಾನು ಅವರಿಂದ ಕಲಿತಿದ್ದೇನೆ. ಅವರಿಗೆ ಸಾಮಾನ್ಯರಿಗಿಂತ ಬುದ್ದಿಶಕ್ತಿ ಜಾಸ್ತಿ ಇರುತ್ತದೆ. ಅವರ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿದರೆ ಏನು ಬೇಕಾದರೂ ಸಾಧಿಸುತ್ತಾರೆ ಎಂದರು.

ವಿಕಲಚೇತನರು ಏನೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತಂದರೆ ಎಲ್ಲಾ ರೀತಿಯ ನೆರವು ನೀಡಲು ಸಿದ್ದ. ನಿಮ್ಮ ಸಮಸ್ಯೆಗಳನ್ನು ಒಂದೆಡೆ ಕುಳಿತು ಚರ್ಚಿಸಲು ಕಚೇರಿ, ಅದಕ್ಕೆ ಬೇಕಾದ ನಿವೇಶನ ಇನ್ನು 15 ದಿನಗಳಲ್ಲಿ ನೀಡಲು ಸಿದ್ದನಿದ್ದೇನೆ. ವಿಕಲಚೇತನರ ಸಂಘದ ಸದಸ್ಯರು ಯಾವುದೇ ಸಮಸ್ಯೆಗಳಿದ್ದರೆ ಪಟ್ಟಿ ಮಾಡಿ ನನ್ನ ಗಮನಕ್ಕೆ ತಂದರೆ ಅವರಿಗೆ ಮೊದಲ ಆದ್ಯತೆ ನೀಡಲಾಗುವುದು. ಅಧಿಕಾರಿಗಳು ಸಹ ವಿಕಲಚೇತನರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿ ಕೊಡಬೇಕು ಎಂದು ಸೂಚಿಸಿದರು.

ಅಂಗವಿಕಲತೆಯನ್ನು ಪೋಲಿಯೋ ಹನಿ ಹಾಕಿಸುವುದರ ಮುಖಾಂತರ ತಡೆಗಟ್ಟಬಹುದು. ವರ್ಷಕ್ಕೆ ಒಂದೆರಡು ಬಾರಿ ತಪ್ಪದೇ ಪೋಷಕರು ತಮ್ಮ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಬೇಕು. ಪೋಲಿಯೋ ದಿನ ಇದ್ದಾಗ ಪ್ರತಿಯೊಬ್ಬರೂ ಒಬ್ಬೊಬ್ಬರಿಗೆ ಹನಿ ಹಾಕಿಸುವ ಸಂಕಲ್ಪ ಮಾಡಿದರೆ ಖಂಡಿತಾ ಅಂಗವಿಕಲತೆಯನ್ನು ತಡೆಗಟ್ಟಬಹುದು ಎಂದರು.

ತಹಶೀಲ್ದಾರ್ ಎಚ್.ವಿಶ್ವನಾಥ ಮಾತನಾಡಿ, ವಿಕಲಚೇತನರ ಸಮಸ್ಯೆಗಳನ್ನು ಪರಿಹರಿಸಲು ಈಗಾಗಲೇ ಪ್ರತಿ ಮೂರು ತಿಂಗಳಿಗೊಮ್ಮೆ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಕುಂದು ಕೊರತೆ ಸಭೆಗಳನ್ನು ನಡೆಸಲಾಗುತ್ತಿದೆ. ಸಭೆಯಲ್ಲಿ ಸಾಧ್ಯವಾದಷ್ಟು ಸ್ಥಳದಲ್ಲಿಯೇ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ. ಇನ್ನುಳಿದ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುತ್ತಿದೆ. ತಾಲೂಕಿನ 6104 ವಿಕಲಚೇತನರಿಗೆ ಪಿಂಚಣಿ ನೀಡಿ, ಶೇ.99ರಷ್ಟು ಗುರಿಯನ್ನು ಸಾಧಿಸಲಾಗಿದೆ. ಇನ್ನುಳಿದವರು ಇದ್ದರೆ ಅವರನ್ನು ಗುರುತಿಸಿ ಪಿಂಚಣಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನಗರಸಭೆ ಅಧ್ಯಕ್ಷೆ ಕೆ.ನಾಗಲಕ್ಷ್ಮಮ್ಮ ಅಧ್ಯಕ್ಷತೆ ವಹಿಸಿದ್ದರು. ತಾ.ಪಂ.ಅಧ್ಯಕ್ಷ ಜೋಗದ ನೀಲಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀಧರನಾಯ್ಡು, ನಗರಸಭೆ ಮಾಜಿ ಉಪಾಧ್ಯಕ್ಷೆ ಧನಲಕ್ಷ್ಮಿ, ಬಿಇಒ ಎಲ್.ಡಿ.ಜೋಶಿ, ಹಿರಿಯ ಗಾಂಧಿವಾದಿ ಜಯಪ್ರಕಾಶ ನಾರಾಯಣ ಭಟ್ಟರು ಸೇರಿದಂತೆ ವಿಕಲಚೇತನ ಮಕ್ಕಳು ಉಪಸ್ಥಿತರಿದ್ದರು.

# ಹಡಗಲಿಯಲ್ಲಿ ವಿಶ್ವ ಮಣ್ಣು ಆರೋಗ್ಯ ದಿನಾಚರಣೆ




ಬಳ್ಳಾರಿ

ಕೃಷಿ ಇಲಾಖೆ, ಹಡಗಲಿಯಲ್ಲಿ ಕೃಷಿ ಇಲಾಖೆ ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಹಡಗಲಿ ಇವರ ಸಹಯೋಗದೊಂದಿಗೆ ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಯನ್ನು ಬುಧವಾರರಂದು ಹಡಗಲಿಯ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಪಿ.ಎಮ್. ಬಸವರಾಜ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ರೈತರು ಭೂಫಲವತ್ತತೆ ಕಾಪಾಡುವುದರಿಂದ ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ಹೆಚ್ಚಿನ ಇಳುವರಿ ಪಡೆಯಬಹುದು ಎಂದು

ಹಡಗಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ವಿಸ್ತರಣಾ ಮುಂದಾಳುಗಳಾದ ಡಾ. ಸಿ. ಎಮ್. ಕಾಲಿಬಾವಿಯವರು ಅವರು ಮಾತನಾಡಿ ಮುಂದುವರೆದು ಆಹಾರ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಒತ್ತು ಕೊಡುವುದರ ಜೊತೆಗೆ ಮಣ್ಣಿನ ಆರೋಗ್ಯ ಕಾಪಾಡುವುದು ಸಹ ಅತೀ ಅವಶ್ಯಕ, ಮಣ್ಣು ಆರೋಗ್ಯವಾಗಿರಲು ಸಾವಯವ, ಜೈವಿಕ, ಕೃಷಿ ತ್ಯಾಜ್ಯ ವಸ್ತುಗಳ ಸದ್ಬಳಕೆಯಿಂದ ನಿರಂತರ ಕೃಷಿ ಕೈಗೊಳ್ಳಲು ಸಾಧ್ಯ. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಡಿ.8 ರಿಂದ11 ರವರೆಗೆ ಕೃಷಿಮೇಳವನ್ನು ಹಮ್ಮಿಕೊಂಡಿದ್ದು ಹೆಚ್ಚಿನ ಸಂಖ್ಯೆಯ ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಸಹಾಯಕ ಕೃಷಿ ನಿರ್ದೇಶಕರಾದ ಹನುಮಂತಪ್ಪ ಪಡಸಲಗಿ ಅವರು ಮಾತನಾಡಿ ಮಣ್ಣು ಆರೋಗ್ಯದ ಮಹತ್ವದ ಬಗ್ಗೆ ಮತ್ತು ಜೊತೆಗೆ ಕೃಷಿ ಇಲಾಖೆಯ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು. ಗೃಹ ವಿಜ್ಞಾನಿಯಾದ ಸುನೀತಾ ಎನ್. ಹೆಚ್. ರವರು ಮಣ್ಣಿನ ಆರೋಗ್ಯ ಕಾಪಾಡುವುದರಿಂದ ಆಹಾರ ಪದಾರ್ಥಗಳ ಗುಣಮಟ್ಟ ಹೆಚ್ಚಿಸಿ ಮಾನವನ ಆರೋಗ್ಯ ಕಾಪಾಡುತ್ತದೆ ಎಂದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಾದ ರಾಜಶೇಖರ್, ನಿಂಗಪ್ಪ, ಆತ್ಮ ಯೋಜನೆಯ ಅಧಿಕಾರಿಗಳಾದ ಸವಿತ ಹಾಗೂ ಪ್ರಗತಿಪರ ರೈತರು ಇದ್ದರು.

# ರಾಜ್ಯದ ಕಾಂಗ್ರೆಸ್ ಸರ್ಕಾರ ಬಡವರ ಪರವಾದ ಸರ್ಕಾರ




ಮಲೇಬೆನ್ನೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಬಡ ವರ್ಗದ ಜನರಿಗೆ ಅನೇಕ ಜನಪರ ಯೋಜನೆಗಳು ಜಾರಿಗೊಳಿಸಿ ಬಡವರ ಪರವಾದ ಸರ್ಕಾರ ಎನಿಸಿಕೊಂಡಿದೆ ಎಂದು ಹರಿಹರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಸ್.ರಾಮಪ್ಪ ಹೇಳಿದರು.

ಅವರು ಮಲೇಬೆನ್ನೂರಿನ ಅಜಾದ್ ನಗರ ಹಾಗೂ ಇಂದಿರಾ ನಗರಗಳಲ್ಲಿ ಜೆ.ಡಿ.ಎಸ್ ನಿಂದ 150ಕ್ಕೂ ಹೆಚ್ಚು ಅಲ್ಪಸಂಖ್ಯಾತ ವರ್ಗದ ಕಾರ್ಯಕರ್ತರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಮಾತನಾಡುತ್ತಾ ರಾಜ್ಯದಲ್ಲಿ ಅಲ್ಪಸಂಖ್ಯಾತ ಹಿಂದುಳಿದ ವರ್ಗ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜನರು ಸಿದ್ದರಾಮಯ್ಯನವರ ಸಾಮಾಜಿಕ ನ್ಯಾಯದ ಚಿಂತನೆಗೆ ಮಾರು ಹೋಗಿ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಈ ಸರ್ಕಾರ ಈ ವರ್ಗಗಳಿಗೆ ಒದಗಿಸಿರುವ ಯೋಜನೆಗಳೇ ಕಾರಣ ಕೇಂದ್ರ ಸರ್ಕಾರ ಆಡಳಿತ ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದ್ದು ಅದು ಬಂಡವಾಳ ಶಾಹಿಗಳ ಸರ್ಕಾರ ಎಂಬುದನ್ನು ಈಗಾಗಲೇ ಸಾಬೀತು ಪಡಿಸಿದೆ ಹರಿಹರ ಶಾಸಕರು ಆಶ್ವಾಸನೆಗಳನ್ನು ನೀಡುತ್ತಾ ಸರ್ಕಾರವನ್ನು ಟೀಕೆ ಮಾಡುತ್ತಾ ಕಾಲಹರಣ ಮಾಡುತ್ತಿದ್ದಾರೆ ಎಂದರು.

ಹರಿಹರ ಜನತೆಯ ಇವರ ದರ್ಪ,ನಿರ್ಲಕ್ಷಕ್ಕೆ ಬೇಸತ್ತು ಬದಲಾವಣೆಗಾಗಿ ಚುನಾವಣೆಗೆ ಕಾಯುತ್ತಿದ್ದಾರೆ ನಾವು ಕೊಮಾರನ ಹಳ್ಳಿ ಕೆರೆ ಅಭಿವೃದ್ಧಿಪಡಿಸಿ ಮಲೇಬೆನ್ನೂರು ಸುತ್ತಮುತ್ತಲಿನ 25ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಹದಿನೇಳು ಕೋಟಿ ಡಿ.ಪಿ.ಆರ್ ಹಾಗೂ ಭೈರನಪಾದ ಏತನೀರಾವರಿ ಯೋಜನೆಗೆ ಐವತ್ತೆರಡು ಕೋಟಿಗಳ ಡಿ.ಪಿ.ಆರ್ ಮಾಡಿಸಿ ಈ ಸಂಬಂಧ ರಾಜ್ಯದ ಮುಖ್ಯಮಂತ್ರಿಯವರಿಗೆ ಭೇಟಿಯಾಗಿ ಪ್ರಸವನೆ ಸಲ್ಲಿಸಿದ್ದು ಸದ್ಯದಲ್ಲೆ ಅನುಮೋದನೆ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದ ಅವರು ಕಳೆದ ನಾಲ್ಕುವರೇ ವರ್ಷಗಳಲ್ಲಿ ಹರಿಹರ ತಲ್ಲೂಕಿನಲ್ಲಿ ಪಕ್ಷದ ಉಸ್ತುವಾರಿ ನನ್ನ ನೇತೃತ್ವದಲ್ಲಿ ನಡೆದಿದೆ ಕಳೆದ ಚುನಾವಣೆಯಲ್ಲಿ ಎರಡನೇ ಸ್ಥಾನದಲ್ಲಿದ್ದು ಪಕ್ಷವು ಈ ಎಲ್ಲಾವನ್ನು ಪರಿಗಣಿಸಿ ನನಗೆ ಪಕ್ಷದ ಟಿಕೆಟ್ ನೀಡಲಿದೆ ಎಂದರು.

ಈ ಸಭೆಯನ್ನು ಉದ್ದೇಶಿಸಿ ಜಿ.ಪಂ ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಮಾತನಾಡಿ ಹರಿಹರ ಶಾಸಕರು ಅಬಿವೃದ್ದಿಯಲ್ಲಿ ತಾರತಮ್ಯ ಮಾಡುತ್ತಿದ್ದಾರೆ ಕಳೆದ ಪುರಸಭಾ ಚುನಾಬವಣೆಯಲ್ಲಿ ನಮ್ಮ ಪಕ್ಷದ ಐದು ಜನ ಅಬ್ಯಾರ್ಥಿಗಳು 20 ವೋಟುಗಳ ಅಂತರದಿಂದ ಸೋಲಬೇಕಾಯಿತು ಒಂದು ವೇಳೆ ನಮ್ಮ ಪಕ್ಷಕ್ಕೆ ಬಹುಮತ ಸಿಗುತ್ತಿದ್ದರೆ ರಾಜ್ಯದಲ್ಲಿ ನಮ್ಮ ಸರ್ಕಾರದಿಂದ ಹೆಚ್ಚಿನ ಅಬಿವೃದ್ಧಿ ಮಾಡಲು ಸಹಕಾರಿ ಆಗುತ್ತಿತ್ತು ಎಂದ ಅವರು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಬಹುತೇಕ ಖಚಿತವಾಗಿದ್ದು ಅಲ್ಪಸಂಖ್ಯಾತ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಶುಭದ ಸಂಕೇತ ಎಂದರು.

ಈ ಸಭೆಯನ್ನು ಉದ್ದೇಶಿಸಿ ತಾ.ಪಂ ಮಾಜಿ ಅಧ್ಯಕ್ಷ ಎಮ್.ಬಿ ರೋಷನ್ ಅಲಿ ಮಾತನಾಡಿ ಕೇಂದ್ರದ ಬಿ.ಜೆ.ಪಿ ಸರ್ಕಾರ ಅಲ್ಪಸಂಖ್ಯಾತರ ಹಕ್ಕುಗಳಿಗೆ ಖಡಿವಾಣ ಹಾಕಲು ಹೊರಟಿದೆ ಮಲೇಬೆನ್ನೂರು ಪುರಸಭೆಯಲ್ಲಿ ಜೆ.ಡಿ.ಎಸ್ ಪಕ್ಷದವರನ್ನು ನಮ್ಮ ಪಕ್ಷದೊಂದಿಗೆ ಮೈತ್ರಿ ಮಾಡಿ ಕೊಳ್ಳಲು ವಿನಂತಿಸಿದರು ಶಾಸಕರು ಬಿ.ಜೆ.ಪಿ ಯೊಂದಿಗೆ ಮೈತ್ರಿ ಮಾಡಿಕೊಂಡು ಅವರು ಎಂತ ಜಾತ್ಯಾತೀತ ಪಕ್ಷ ಎಂದು ತೋರಿಸಿ ಕೊಟ್ಟಿದ್ದಾರೆ ಮುಂದಿನ ದಿನಗಳಲ್ಲಿ ಅವರಿಗೆ ತಕ್ಕ ಪಾಠ ಕಲಿಸಲು ಕರೆ ನೀಡಿದರು.

ಈ ಸಭೆಯನ್ನು ಉದ್ದೇಶಿಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಬಿ ಆಬಿದ್ ಅಲಿ ಎ.ಪಿ.ಎಂ.ಸಿ ನಿರ್ದೇಶಕ ಜಿ ಮಂಜುನಾಥ್ ಪಾಟೀಲ್ ಹಕೀಮ್ ಜೀಲಾನಿ ಸಾಬ್ ಫೈಜ್ ಮೋಯಿದ್ದೀನ್ ದಾದವಲಿ ಮಾತನಾಡಿದರು ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಪಿ.ಎಸ್ ಹನುಮಂತಪ್ಪ, ಮುಖಂಡರಾದ ಬಿ. ವೀರಯ್ಯ ಮೋಸಿನ್ ಹರಿಹರ ಪುರಸಭಾ ಸದಸ್ಯ ಬಿ ಅಬ್ದುಲ್ ಲತೀಫ್ ಕಿಸಾನ್ ಸೆಲ್ ಅಧ್ಯಕ್ಷ ವಾಸುದೇವ್ ಮೂರ್ತಿ ಯುವ ಕಾಂಗ್ರೆಸ್ ಶೋಯೆಬ್ ಫಾಜಿಲ್ ಖಾನ್ ಸಿದ್ದನಗೌಡ ಬುಡೇನ್ ಖಾನ್ ದಾದಾಪೀರ್ ಫಕೃದ್ದೀನ್ ಅಲಿ ಆಹ್ಮದ್ ನಾಗರಾಜ್ ಸಿ.ಬಿ ಸಿ ಅಬ್ದುಲ್ ಮಜೀದ್ ಸಿಕಂದರ್ ಫಯಾಜ್ ಖರ್ಶಿದ್ ಸಾಬ್ ಗಾಂಜಿ ಮಹಬೂಬ್ ಸೈಯ್ಯದ್ ಸಕಲೇನ್ ಬಿ ನಾಸೀರ್ ಅಮೀರ್ ಸುಹೇಲ್ ಎಮ್. ಷಾ ಅಬ್ರಾರ್ ಶಹಬಾಜ್ ಇನ್ನಿತರರು ಭಾಗಿಯಾಗಿದ್ದರು.

# ಸಾಮಾಜಿಕ ಕಾರ್ಯಕ್ಕೆ ಸರ್ವ ಸಮಾಜವು ಗೌರವಿಸಿದಂತೆ

ಜಗಳೂರು

ಶೋಷಿತ ಸಮುದಾಯಗಳ ಅಭಿವೃದ್ದಿಗಾಗಿ ಶ್ರಮಿಸುತ್ತಿರುವ ಮಾನವ ಬಂಧುತ್ವ ವೇದಿಕೆಯ ಸಂಸ್ಥಾಪಕ ಸತೀಶ್ ಜಾರಕಿಹೊಳಿಯವರ ಸಾಮಾಜಿಕ ಕಾರ್ಯ ಸರ್ವ ಸಮಾಜವು ಗೌರವಿಸುವಂತ್ತಾಗಿದೆ ಎಂದು ಶಾಸಕ ಹೆಚ್.ಪಿ.ರಾಜೇಶ್ ಹೇಳಿದರು.

ಪಟ್ಟಣದ ಮಹಾತ್ಮಗಾಂಧಿ ವೃತ್ತದಲ್ಲಿ ಮಾನವ ಬಂಧುತ್ವ ವೇದಿಕೆಯ ಜಾಗೃತಿ ರಥಯಾತ್ರೆಯನ್ನು ಸ್ವಾಗತಿಸಿ ಮಾತನಾಡಿದ ಅವರು ಕಳೆದ ನಾಲ್ಕು ವರ್ಷಗಳಿಂದಲೂ ಬಂಧುತ್ವ ವೇದಿಕೆಯಡಿಯಲ್ಲಿ ಮೂಢನಂಬಿಕೆ ಕಂದಚಾರ,ಸಾಮಾಜಿಕ ಶೋಷಣೆ ಯಂತಹ ವಿಚಾರಧಾರೆಗಳನ್ನು ವಿರೋಧಿಸಿ ವೈಜ್ಞಾನಿಕ ತಳಸಹದಿಯಮೇಲೆ ಸಮಾಜವನ್ನು ಸಂಘಟಿಸುವತ್ತಾ ಶ್ರಮವನ್ನು ವಹಿಸುತ್ತಿರುವ ಇವರ ಚಿಂತನೆ ಮುಂದಿನ ದಿನಗಳಲ್ಲಿ ಯಶಸ್ವಿಯಾಗಿ ಬೆಳಗಲೆಂದು ಅವರು ಹಾರೈಸಿದರು.

ದಲಿತ ಮುಖಂಡ ಶಂಭುಲಿಂಗಪ್ಪ ಮಾತನಾಡಿ ಅಂಬೇಡ್ಕರ್ ರವರ ಕಂಡಂತಹ ಸಮ ಸಮಾಜದ ಕನಸನ್ನು ಈಡೇರಿಸುವತ್ತಾ ಸಾಗುತ್ತಿರುವ ಜಾರಕಿಹೊಳಿಯವರು ಸಮಾಜದಲ್ಲಿ ಉತ್ತಮವಾದ ಮೌಲ್ಯವುಳ್ಳ ವ್ಯಕ್ತಿಯಾಗಿದ್ದಾರೆ. ಅಂಬೇಡ್ಕರ್ ಮಹಾ ಪರಿನಿರ್ವಾಹಣದೊಂದು ಮೌಢ್ಯ ವಿರೋಧಿ ಸಂಕಲ್ಪ ದಿನಾಚರಣೆಯಾಗಿ ಮಾಡುತ್ತಿರುವ ಕಾರ್ಯಯಕ್ಕೆ ರಾಜ್ಯದ ಎಲ್ಲಾ ಪ್ರಗತಿಪರ ಚಿಂತಕರು ಸಂಘ ಸಂಸ್ಥೆಗಳ ಅಸಂಖ್ಯಾತ ಶೋಷಿತ ಸಮುದಾಯಗಳು ಅವರ ಬೆನ್ನಿಂದೆ ನಿಂತು ಸಾಮಾಜಿಕ ಬದಲಾವಣೆಗೆ ಶ್ರಮಿಸಬೇಕಿದೆ ಈ ನಿಟ್ಟಿನಲ್ಲಿ ಜಗಳೂರು ತಾಲ್ಲೂಕಿನ ಮಾನವ ಬಂಧುತ್ವ ವೇದಿಕೆ ನಡೆಸುವ ಕಾರ್ಯಕ್ರಮಗಳಿಗೆ ಪ್ರತಿಯೊಬ್ಬ ಸಮಾಜದವರು ಕೈಜೋಡಿಸಬೇಕೆಂದು ಅವರು ಮನವಿ ಮಾಡಿದರು.

ವಕೀಲರಾದ ಸಣ್ಣಓಬಯ್ಯ ಮಾತನಾಡಿ ಗ್ರಾಮೀಣ ಭಾಗದ ಶೋಷಿತ ಸಮುದಾಯಗಳು ಆಧುನಿಕ ಯುಗದಲ್ಲಿ ಮೂಢನಂಬಿಕೆಗಳಿಗೆ ಮಾರುಹೋಗಿ ಹಬ್ಬ ಹರಿದಿನಗಳ ನೆಪದಲ್ಲಿ ದುಂದುವೆಚ್ಚವನ್ನುಮಾಡಿ ಆರ್ಥಿಕತೆಯ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಆಚರಣೆಗಳು ಸ್ವಾಭಾವಿಕವಾಗಿ ಇರಬೇಕೆ ಹೊರತು ಧರ್ಮ ಮತ್ತು ದೇವರ ಹೆಸರಿನಲ್ಲಿ ವೈಭವೀಕರಿಸಿ ಆರ್ಥಿಕ ಸಂಕಷ್ಟದಲ್ಲಿ ಸಿಲುಕದೇ ಮಕ್ಕಳಿಗೆ ಶೈಕ್ಷಣಿಕವಾಗಿ ಸಹಕಾರವನ್ನು ನೀಡದಾಗ ಮಾತ್ರ ಸಮ ಸಮಾಜವನ್ನು ನಿರ್ಮಾಣಮಾಡಿದಂತ್ತಾಗುತ್ತದೆ ಎಂದು ಅವರು ಅಭಿಪ್ರಾಯಿಸಿದರು.

ಈ ಸಂದರ್ಭದಲ್ಲಿ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಮಿತಿ ಸದಸ್ಯ ಕೆ.ಪಿ.ಪಾಲಯ್ಯ, ಜಿಲ್ಲಾ ಸಂಚಾಲಕ ಮಾಡಾಳ್ ಶಿವಕುಮಾರ್, ಸಮಿತಿ ಸದಸ್ಯರಾದ ವಕೀಲ ಬಸವರಾಜ್ ,ನಾಗಲಿಂಗಪ್ಪ, ಹಟ್ಟಿತಿಪ್ಪೇಸ್ವಾಮಿ,ಕಾನನಕಟ್ಟೆ ಪ್ರಭು,ಶಿವಕುಮಾರ್, ಬಿಸ್ತುವಳ್ಳಿ ಬಾಬು, ನಾಯಕ ಸಮಾಜದ ಕಾರ್ಯದರ್ಶಿ ಬಿ.ಲೋಕೇಶ್ ತಾಲ್ಲೂಕು ಪ್ರಧಾನ ಸಂಚಾಲಕ ಧನ್ಯಕುಮಾರ್,ಸಹ ಸಂಚಾಲಕ ಸಿದ್ದಮ್ಮನಹಳ್ಳಿ ಬಿ.ಬಸವರಾಜ,ಸಮಿತಿ ಸದಸ್ಯರಾದ ಖಾಸೀಂ ಪೀರ್, ಗೋಗುದ್ದು ತಿಪ್ಪೇಸ್ವಾಮಿ, ಗೊಲ್ಲರಹಟ್ಟಿ ತಿಪ್ಪೇಸ್ವಾಮಿ, ವಕೀಲರಾದ ತಿಪ್ಪೇಸ್ವಾಮಿ,ಕರಿಬಸಪ್ಪ ಸೇರಿದಂತೆ ಮಾನವ ಬಂಧುತ್ವ ವೇದಿಕೆಯ ಸದಸ್ಯರು ಮತ್ತು ವಿವಿಧ ಪ್ರಗತಿ ಪರ ಸಂಘಟನೆಯ ಮುಖಂಡರು ಮತ್ತು ತಾಲ್ಲೂಕು ಅಧ್ಯಕ್ಷರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.